ನಿಂಗೆ ಏನಾದ್ರೂ ಕೆಟ್ಟ ಎಕ್ಸ್ಪೀರಿಯನ್ಸ್ ಆಯ್ತಾ? ಅಜ್ಜಾಅಜ್ಜಿ ಬೈದ್ರಾ? ಇಲ್ಲಾ ಮಾವ ಅತ್ತೆ ಹೊಡೆದ್ರಾ. ಅಮ್ಮನ ಹತ್ತಿರ ಹೇಳಿಕೊಳ್ಳೋಕೂ ಕಷ್ಟ ಅಲ್ವಾ ನಿಮ್ಗೆ..? ಅಮ್ಮಅಪ್ಪ ಯಾರೂ ಬೇಡವಾದ್ರಲ್ವಾ..? ದೊಡ್ಡವರಾಗಿಬಿಟ್ರಿ ಬಿಡಿ ನೀವು...?" ಎಂದು ಶಾಲಿನಿ ಅಳು ತುಂಬಿದ ದನಿಯಲ್ಲಿ ಕೇಳಿದಳು.

ಅಮ್ಮನೊಡನೆ ಹೀಗೆ ಮನ ಬಿಚ್ಚಿ ಮಾತನಾಡುವುದು ಮಕ್ಕಳಿಗೆ ತುಂಬಾ ಬೇಕಿತ್ತು. ಆಕೆಯ ಪ್ರೀತಿಯ ಸಾಂತ್ವನ ದುಗುಡ ತುಂಬಿದ ಮನಸ್ಸಿಗೆ ಸಮಾಧಾನ ತಂದಿತು. ಐದು ದಿನದಿಂದ ಬಿಗಿದುಕೊಂಡು ಇರಬೇಕಾಗಿದ್ದ ತಮ್ಮ ಅಸಹಜ ಅವತಾರವನ್ನು ಅವರು ಆದಷ್ಟು ಬೇಗ ಕೈಬಿಡಬೇಕಿತ್ತು. ಅಮ್ಮನ ಕಕ್ಕುಲಾತಿಯ ದನಿ ಕೇಳಿದ್ದೇ ಮಕ್ಕಳು ತಮ್ಮ ದುಃಖದ ಕಟ್ಟೆ ಒಡೆದುಕೊಂಡರು. "ಅಮ್ಮಾ... ಅಜ್ಜಾಅಜ್ಜೀನ ನಮ್ಮ ಮನೇಗೇ ಕರೆದುಕೊಂಡು ಬಂದ್ಬಿಡೋಣಾ..." ಎಂದು ಅಳಲು ಶುರುಮಾಡಿದರು. ಮಕ್ಕಳ ಅಳು ಹಾಗೂ ಆ ಅಳುವಿಗೆ ಇರುವ ಕಾರಣ ನೆನಪಾಗಿ ಶಾಲಿನಿಯೂ ಕಂಬನಿಗಣ್ಣಾದಳು. ಅವಳಿಗೂ ತನ್ನ ತವರೂರಿನ ಪರಿಸ್ಥಿತಿ ನೆನಪಾಗಿ ಮನಸ್ಸು ಕಂಗೆಟ್ಟಿತು.

ಪದೇ ಪದೇ ಬರುತ್ತಿದ್ದ ಹಾಳು ರಾಜಕೀಯ ಚುನಾವಣೆಗಳು, ಅದರಿಂದಾಗಿ ಸುಲಭಕ್ಕೆ ಸಿಗುತ್ತಿದ್ದ ಕುಡಿತದ ಹೆಂಡ, ಸಾವಿರಾರು ರೂಪಾಯಿ ಹಣದಿಂದಾಗಿ ಹಳ್ಳಿಯ ಪರಿಸ್ಥಿತಿ ಹದಗೆಟ್ಟಿತ್ತು. ಇಸ್ಪೀಟಿನ ಚಟಕ್ಕೆ ಈಗೆರಡು ವರ್ಷಗಳಿಂದ ಬಲಿಬಿದ್ದಿದ್ದ ಶಾಲಿನಿಯ ಅಣ್ಣ ಮೊದಲಿನಂತೆ, ಹೊಲಮನೆಯ ನಿಗಾ ಮರೆತಿರುವುದು, ಅತ್ತಿಗೆಯೊಬ್ಬಳೇ ಎಲ್ಲವನ್ನೂ ನಿಭಾಯಿಸಲಾಗದೆ ಹೆಣಗಾಡಿ ಹೆಣಗಾಡಿ ಸಾಕಾಗುತ್ತಿದ್ದದ್ದು ನೆನಪಾಯಿತು. ಜೊತೆಗೆ ಹೊಟ್ಟೆಯಲ್ಲಿಯೇ ಸತ್ತ ಮಗುವನ್ನು ಇರಿಸಿಕೊಂಡು, ತಾನೂ ಸಾಯುವಂತಾಗಿದ್ದಾಗ ಅತ್ತಿಗೆಯು ಪುಣ್ಯವಶಾತ್ ಆಶಾ ಕಾರ್ಯಕರ್ತೆಯಾದ ಶೋಭಾ ದೆಸೆಯಿಂದ ಆಸ್ಪತ್ರೆ ಸೇರಿ ನಾಕಾರು ದಿನ ಸಾವಿನ ಬಾಗಿಲು ಬಡಿದು ಕೊನೆಗೆ ಬದುಕಿಕೊಂಡದ್ದು, ಒಂದು ಸಂತಸವಾದರೆ, ಹೀಗೆ ಬದುಕಿ ಬಂದ ಅತ್ತಿಗೆ ಗಂಡನ ದುರ್ಗತಿಗೆ ತನ್ನ ಅತ್ತೆ ಮಾವನವರೇ ಕಾರಣವೆಂದು ಅವರನ್ನು ಹೋಗಿ ಬಂದು ಮೂದಲಿಸುತ್ತಿದ್ದ ವಿಷಯ ಊರಿನವರಿಂದಲೇ ಶಾಲಿನಿಯ ಕಿವಿಗೆ ಬಿದ್ದು ಮರೆಲಾಗದ ನೋವಾಗಿ ಉಳಿದಿತ್ತು.

ಆ ನಡುವೆಯೇ ಒಮ್ಮೆ ಆಫೀಸಿಗೂ ರಜೆ ಹಾಕಿ ಶಾಲಿನಿ ಒಬ್ಬಳೇ ಊರಿಗೆ ಹೋಗಿದ್ದಳು. ಆಗಲೇ ಹೊಟ್ಟೆ ಮಗುವನ್ನು ಕಳೆದುಕೊಂಡ ಸಂಕಟಕ್ಕೆ, ಗಂಡನ ಹೇತಲಾಂಡಿ ಬದುಕಿಗೆ ಬೇಸತ್ತು, ಸತ್ತೂ ಬದುಕಿ ಬದಲಾದ ಅತ್ತಿಗೆಯು, ಕೆಟ್ಟ ಮಗನನ್ನು ಹೆತ್ತು, ತನ್ನ ಕೊರಳಿಗೆ ಗಂಟು ಹಾಕಿದ್ದೀರೆಂದು ಗಳಿಗೆಗೊಮ್ಮೆ ತನ್ನ ತಾಯ್ತಂದೆಯರ ಮುಖಕ್ಕೆ ಹೊಡೆದಂತೆ ಮೂದಲಿಸಿ ಮಾತನಾಡುವುದನ್ನು ಕಂಡು ನೊಂದಿದ್ದಳು. ಹೆಂಡತಿಯ ಭರ್ತ್ಸನೆಯನ್ನೇ ನೆಪ ಮಾಡಿಕೊಂಡ ಶಾಲಿನಿಯ ಅಣ್ಣನೂ ಮತ್ತಷ್ಟು ಪೈಶಾಚಿಕವಾಗಿ ವರ್ತಿಸುತ್ತಿದ್ದದ್ದು



ಅಸಹ್ಯವೆನಿಸಿತ್ತು. ಆತನಿಗೂ ನಾಕಾರು ಬುದ್ಧಿ ಮಾತು ಹೇಳಲು ಯತ್ನಿಸಿದ್ದಳು. ಅಮಲಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವನಿಗೆ ಯಾರ ಮಾತೂ ರುಚಿಸಲಿಲ್ಲ. ಹಿಂದೆ ಸ್ವರ್ಗದಂತಿದ್ದ ತನ್ನ ತವರು ನರಕವಾದದ್ದು ಕಂಡ ಶಾಲಿನಿ ಮೌನವಾಗಿ ರೋಧಿಸಿದಳು.

ಈ ನರಕದಲ್ಲಿ ನರಳಾಡುವ ಬದಲು ತಮ್ಮೊಡನೆ ಬರುವಂತೆ ಶಾಲಿನಿ ಶರತರು ಮತ್ತೊಮ್ಮೆ ಬಂದು ಮಮತೆಯಿಂದ ಕರೆದಾಗಲೂ, 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂದು ಅವರೊಡನೆ ಹೋಗಲು ನಿರಾಕರಿಸಿ ಅದೇ ನರಕದಲ್ಲಿ ಉಳಿಯಲು ಸಿದ್ಧರಾದ ತಾಯ್ತಂದೆಯರ ಮೇಲೆ ಶಾಲಿಗೆ ಬಂದ ಕೋಪವು; ಅವರ ಆಸ್ತಿಗೆ ಕಣ್ಣು ಹಾಕಿದ್ದೀನೆಂದು ಮೂದಲಿಸಿದ ಒಡಹುಟ್ಟಿದ ಅಣ್ಣನ ಮೇಲೆ ಬಂದ ಕೋಪಕ್ಕಿಂತಲೂ ಹೆಚ್ಚಿನದಾಗಿತ್ತು. ಒಟ್ಟೊಟ್ಟಿಗೇ ಒತ್ತರಿಸಿ ಬಂದ ದುಃಖದಿಂದ ಶುಕ್ರವಾರ ಎಂಬ ಶುಭ ದಿನವನ್ನೂ ನೋಡದೆ.., ತವರಿನಿಂದ ಅರಿಶಿನ ಕುಂಕುಮ ತಾಂಬೂಲವನ್ನೂ ಪಡೆಯದೇ ತನ್ನ ಮನೆಗೆ ಗಂಡನೊಡನೆ ಹತಾಶೆಯಿಂದ ಹಿಂದಿರುಗಿದ್ದಳು...

ಬರುವಾಗ ಇದ್ದ ದುಃಖ ಬಂದ ಮೇಲೂ ಎಷ್ಟು ದಿನ ಉಳಿಯುವುದು? ದಿನ ಕಳೆದಂತೆ ನಿತ್ಯೋಪಚಾರದ ಕಾಯಕದಲ್ಲಿ ತೊಡಗಿ ನೋವು ಮರೆಯುವಂತಾದರೂ, ಮನದ ಒಳ ಮೂಲೆಯಲ್ಲಿ ತಿದಿ ಒತ್ತಿದಂತೆ ಕಿಡಿ ಹೊತ್ತಿ ಸುಡುತ್ತಿತ್ತು. ಅಷ್ಟರಲ್ಲಿ ವರ್ಷವೊಂದು ಉರುಳಿತ್ತು.

ಇಷ್ಟೆಲ್ಲಾ ಆದರೂ ದೊಡ್ಡವರ ಮೂರ್ಖತನಕ್ಕೆ ಮಕ್ಕಳೇಕೆ ಬಲಿಯಾಗಬೇಕು ಎಂದು, ಈ ಬಾರಿಯ ಗೌರಿ ಗಣೇಶ ಹಬ್ಬಕ್ಕೆ ಮಕ್ಕಳನ್ನೇ ಕಳಿಸಿಕೊಟ್ಟಿದ್ದರಲ್ಲಿ ಶಾಲಿನಿಗಿಂತಲೂ ಶರತನ ಕಕ್ಕುಲಾತಿ ದೊಡ್ಡದು. ರಕ್ತಸಂಬಂಧ ಇಂದಲ್ಲಾ ನಾಳೆ ಗಟ್ಟಿಯಾಗಲೇಬೇಕು ಎನ್ನುವ ಆಶಾವಾದಿ ಶರತ್. ಎಷ್ಟೋ ಬಾರಿ ತಾಯ್ತಂದೆಯರಿಲ್ಲದ ತನ್ನ ಮನೆಗೇ ಶಾಲಿನಿಯವರ ತಾಯ್ತಂದೆಯರೇ ಬಂದು ಇರುವಂತಾದರೆ ಎಷ್ಟು ಚೆಂದ ಎಂಬುದನ್ನು ಆಡಿಯೂ ತೋರಿಸಿದ್ದ. ಶರತನ ಪ್ರೀತಿಗೆ, ಹೃದಯ ವಿಶಾಲತೆಗೆ ಶಾಲಿನಿಯೂ ಕೆಲವೊಮ್ಮೆ ಮೂಕಳಾಗಿದ್ದಳು. ಆದರೂ, ಕಷ್ಟದ ಪರಿಸ್ಥಿತಿ ಬಂದೊದಗಿರುವಾಗಲೂ ಮಗಳ ಮನೆಗೆ ಬರಲು ಹಿಂಜರಿಯುತ್ತಿರುವ ತನ್ನ ಹಿರಿಯರ ಬಗ್ಗೆ ; ಅವರಿಗೆ ಆಶ್ರಯ ಕೊಟ್ಟು ಆಸ್ತಿ ಹೊಡೆಯುವ ಸಂಚು ಮಾಡುತ್ತಿರುವೆನೆಂದು ತನ್ನ ಕುರಿತು ವ್ಯಂಗ್ಯವಾಡಿದ ಅಣ್ಣನ ಬಗೆಗೆ ಶಾಲಿನಿಯ ಮನಸ್ಸು ಕಲ್ಲಾಗಿ ಹೋಗಿತ್ತು.

ಆದರೂ ಈಗ ಮಕ್ಕಳಿಬ್ಬರೂ ಅವರ ಅಜ್ಜಅಜ್ಜಿಯರ ಸ್ಥಿತಿಯ ಬಗ್ಗೆ ಇಷ್ಟು ನೊಂದು ಮರುಗಿ ಮನ ನೋಯಿಸಿಕೊಂಡಿದ್ದಾರೆ ಎಂದಾದರೆ, ಅವರ ತಾಯಿ ಶಾಲಿನಿಯ ಹೃದಯವೂ ಬೆಂದು ಕರಗದೇ? ನೊಂದು ಮರುಗದೇ? ಆದ್ದರಿಂದಲೇ ಮಕ್ಕಳನ್ನು ಹತ್ತಿರ ಕೂರಿಸಿಕೊಂಡು ವಾತ್ಸಲ್ಯದಿಂದ. "ಏನಾಯ್ತು ಊರಲ್ಲಿ? ಏನು ನೋಡಿದ್ರಿ? ಅಜ್ಜಅಜ್ಜಿಯರು ಹೇಗಿದ್ದಾರೆ? ಅತ್ತೆ ಮಾವ ಹೇಗಿದ್ದಾರೆ?" ಎಂದು ನಿಧಾನವಾಗಿ ಕೇಳಿದಳು.

ಅಮ್ಮ ಅಳುವಂತಾದದ್ದು ಕಂಡು ಮಕ್ಕಳಿಗೂ ಬಹಳ ಅಳು ಬಂತು. ಮಕ್ಕಳ ಕೆನ್ನೆ ಮೇಲೆ ಹರಿದ ಕಣ್ಣೀರು, ಅಲ್ಲೊಂದು ಅಳುವಿನ ಗುರುತು ಮೂಡಿಸಿತು. ಕಣ್ಣೀರನ್ನು ಒರೆಸಿಕೊಳ್ಳುವುದನ್ನೂ ಮರೆತು, ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದವರು, " ಅಮ್ಮಾ... ಅಜ್ಜಾಅಜ್ಜೀ ಈಗ ಮಾಮನ ಮುಂದೆ ಮನೇಲಿಲ್ಲ... ಹಿಂದಿನ ಕೊಟ್ಟಿಗೆ ಹತ್ತಿರದ ಡಾರ್ಕ್ ರೂಂನಲ್ಲಿದ್ದಾರೇ... ಅಜ್ಜಿಗೆ ಅಡುಗೆ ಮಾಡೋಕಾಗಲ್ಲ, ಅತ್ತೆನೂ ಊಟ ಕೊಡ್ತಿಲ್ಲ, ನಾವು ಮನೆಗೆ ಹೋದಾಗಿಂದ ಆ ಡಾರ್ಕ್ ರೂಮಿನ ಮನೇಲೇ ಇದ್ವಿ. ಅಜ್ಜ ಹಾಸಿಗೆ ಹಿಡಿದ್ದಾರೆ. ಒಂದೊಂದು ಸಲ ಬೆಡ್ ವೆಟ್ ಮಾಡ್ಕೋತಾರೆ. ಅಜ್ಜಿಗೆ ಭಾಳ ಕಷ್ಟ ಆಗ್ತಿದೇ ಅಮ್ಮಾ... ನಾವವರನ್ನು ಕರೆದುಕೊಂಡು ಬಂದ್ಬಿಡೋಣ... ಪ್ಲೀಸ್..." ಎಂದು ಅಳುತ್ತಲೇ ಸಂಕಟದ ವರದಿ ಒಪ್ಪಿಸಿದಳು ರಂಜು. "ನಮ್ಮ ಜೊತೇಗೇ ನಮ್ಮ ಮನೇಗೇ ಬನ್ನಿ ಅಜ್ಜೀ ಪ್ಲೀಸ್ ಅಂದ್ರೆ... 'ನಿಮ್ಮಮ್ಮ ಅಪ್ಪ ಆಗ ಕರೆದಾಗ ನಾವು ಬರಲಿಲ್ಲ. ಅದಕ್ಕೇ ನಿಮ್ಮಮ್ಮಂಗೆ ಕೋಪ ಕಣ್ರೋ ಮಕ್ಕಳಾ. ಒಂದು ವರ್ಷದಿಂದಲೂ ಈ ಕಡೆ ಬರಲಿಲ್ಲ... ಈಗ್ಲೂ ನಿಮ್ಮನ್ನೇ ಕಳಿಸಿದ್ದಾಳೆ. ನೋಡ್ರೋ... ನಾವು ಹೇಗೆ ಬರಬೇಕು ಹೇಳಿ..?'ಅಂತಾ ಅಜ್ಜೀ ಕೈ ಮಾಡ್ತಿದ್ರು ಅಮ್ಮಾ... ಅದಕ್ಕೇ ನಾನೂ ಅಕ್ಕಾನೂ ಒಂದು ಎನ್ ಜಿ ಒ ಜೊತೆ ಮಾತಾಡಿದ್ದಿವಿ. 'ಅಭಯ' ಅಂತ 'ಓಲ್ಡ್ ಏಜ್ ಹೋಂ'ಗೆ ಅಜ್ಜಾಅಜ್ಜೀನ ಸೇರಿಸೋಣ ಅಂತ" ಎಂದು ತಮ್ಮಿಬ್ಬರ ಪ್ಲಾನ್ ಬಗ್ಗೆ ಯಾವುದೇ ರಹಸ್ಯ ಕಾಪಾಡಿಕೊಳ್ಳದೇ ಮೋನು ಎಲ್ಲವನ್ನೂ ಮುಗ್ಧವಾಗಿ ಹೇಳಿಬಿಟ್ಟ.

ಮಕ್ಕಳು ಮಾಡಿಕೊಂಡಿದ್ದ ಪ್ಲಾನ್ ಬಗ್ಗೆ ತಿಳಿದು ಒಂದರೆಕ್ಷಣ ಶಾಕ್‌ಗೆ ಒಳಗಾದ ಶಾಲಿನಿಗೆ ಕಳೆದೆರಡು ವರ್ಷಗಳಿಂದ ತಾನು ಮರೆತಿದ್ದ ಕೆಲಸ ಯಾವುದೆಂದು ಈಗ ಅರಿವಾಯಿತು. ಮಗಳಾಗಿ ಹೆತ್ತವರನ್ನು ಪೊರೆಯಬೇಕಾದವಳ ಕಣ್ಣಿಗೆ ಬಂದಿದ್ದ ಪೊರೆಯನ್ನು ಕಳಚಿದ ತನ್ನಿಬ್ಬರು ಪೋರರ ಬಗ್ಗೆ ಹೆಮ್ಮೆಪಟ್ಟಳು. ಜೊತೆಗೆ ತನ್ನ ಕರ್ತವ್ಯಬದ್ಧತೆಯನ್ನು ಪುನಃ ಮನಗಾಣುತ್ತಾ ಮುಂದಿನ ನಿರ್ಧಾರದ ಕುರಿತು ಮಾತನಾಡಲು ಶರತನ ಹಾದಿ ಕಾಯತೊಡಗಿದಳು.